

**ಎಡದಿಂದ ಬಲಕ್ಕೆ:**

1. ಅಂಥ ಪಾನಕ ಕುಡಿದವರ ಬಗೆಗೆ ಸಹಾನುಭೂತಿ (4)
3. ಗತಿ ಇರದಿದ್ದರೂ ಆಕೆ ಪತಿವ್ರತೆ (3)
7. ಹೊನ್ನಿನ ಹಾರ ಕಾಣಿಸುವುದೇ ಅಪಾಯಕರ (4)
8. ಮಹಾರಾಷ್ಟ್ರದಲ್ಲಿ ವಿಠಲ ಹೇಗೆ ಬದಲಾದ? (3)
9. ಕಲ್ಲೆಸೆವ ಈ ಕ್ರಮ ಒಂದು ಲಲಿತ ವಿದ್ಯೆ (2)
12. ಮೊಸರು ಮಾರುವಾಕೆಯ ಹೆಸರು ಲಕ್ಷ್ಮಿಯದೇ (2)
14. ವಿಚಾರಣಾಸ್ಥಳದ ಸೂರು ಗೊತ್ತೇ? (3)
15. ಹಾರ ಧರಿಸಿದ ಬೇಟೆಗಾರ ಹಕ್ಕಿ ಕಂಡದ್ದು ಗಡಿಯಲ್ಲಿ (4)
17. ಕುಸುಮರಾಶಿಯನ್ನು ಮರೆಮಾಡಿರುವ ಹೊದಿಕೆ ಇದು (3)
18. ನದೀದ್ರವದ ಒಂದೇ ತೊಟ್ಟು (4)

**ಮೇಲಿಂದ ಕೆಳಕ್ಕೆ:**

1. ಇಂಥ ಆಣತಿ! ವಿಪರೀತದ್ದಾಯಿತು ಬಿಡಿ (2)
2. ಕೊಂಬೆಯನ್ನೇರಿದವರ ಕಣ್ಣೀರು ಹೇಗೆ? (3)
4. ರುಚಿದ್ರವ ತುಂಬಿರುವ ಕದಳೀಫಲ (4)
5. ಕರ್ಪೂರ ಕಡಿಮೆಯಾದದ್ದನ್ನು ತುಂಬಿಕೊಟ್ಟದ್ದು (3)
6. ಮದುವೆ ಗಂಡಿಗೆ ಸಿಹಿ ಕೊಟ್ಟದ್ದರ ವಿಷಯ ವಿಸ್ತಾರ ಸಹಿತ (4)
10. ಕಾಣಿಕೆಗಳ ಲೆಕ್ಕಾಚಾರ ಮಾಡಲಿಕ್ಕೆ ಪೆನ್ನು (4)
11. ಎಲ್ಲೆಲ್ಲೂ ಸಂಚರಿಸುವವರ ಬಗೆಗೆ ಕೇಳಿ ತಿಳಿದುಕೋ (4)
13. ಮೂರು ಸಲ ಬಗೆದರೂ ಮಂಕು (3)
16. ಮಾನಿನಿಯರ ಪೂಜ್ಯ ಋಷಿ (2)

## ಪದಬಂಧ: 26-8-2010ರ ಉತ್ತರಗಳು

**ಎಡದಿಂದ ಬಲಕ್ಕೆ:**
1. ವಿಶೇಷ; 3. ಶರಧಿ; 4. ರಟನ; 6. ಭಯಾನಕ; 7. ಹಗೆತನ; 9. ಸುರಾಪಾನ; 11. ಆವರ್ತನೆ; 15. ನೆರಳು; 16. ರೋಚಕ; 17. ಕುಕ್ಕುಟ.

**ಮೇಲಿಂದ ಕೆಳಕ್ಕೆ:**
1. ವಿಧಿಸು; 2. ಷರತ್ತು; 3. ಶಹನ; 5. ನಡಿಗೆ; 6. ಭರಿಸು; 8. ನಮೂನೆ; 10. ಪಾಲನೆ; 12. ವಲ್ಮೀಕ; 13. ಅಳುಕು; 14. ಪರೋಟ.

# ಜೀವ ಜಗತ್ತು

## ‘ಮುಳ್ಳುಹಂದಿ’ - ಏನು ವಿಶೇಷ?



ವಿಶೇಷ ಏನೇ ಇರಲಿ, ಒಂದಂಶ ಸ್ಪಷ್ಟ: ಹಂದಿಗೂ ಮುಳ್ಳುಹಂದಿಗೂ ಹೆಸರಿನಲ್ಲಷ್ಟೇ ಬಂಧ. ಸ್ತನಿವರ್ಗಕ್ಕೆ ಸೇರಿರುವುದೊಂದೇ ಅವಕ್ಕಿರುವ ಸಂಬಂಧ. ವಾಸ್ತವವಾಗಿ ಮುಳ್ಳುಹಂದಿ ‘ಬಿಲವಾಸಿ’ ಬಿಲತೋಡಿ ವಾಸಿಸುವ ಸ್ತನಿಗಳ ಒಂದು ಸಾವಿರದ ಏಳುನೂರ ಇಪ್ಪತ್ತೊಂಬತ್ತು ಪ್ರಭೇದಗಳಲ್ಲಿ ಒಂದು ನೂರ ಒಂದು ಪ್ರಭೇದಗಳು ಮೊನಚಾದ, ದೃಢವಾದ, ಮುಳ್ಳುಗಳಂಥ ರೋಮಗಳ ಕವಚ ಧರಿಸಿವೆ. ಮುಳ್ಳುಹಂದಿಗಳೂ ಈ ಗುಂಪಿಗೇ ಸೇರಿವೆ. ಒಟ್ಟು ಇಪ್ಪತ್ನಾಲ್ಕು ಪ್ರಭೇದಗಳಲ್ಲಿರುವ ಎಲ್ಲ ಮುಳ್ಳುಹಂದಿಗಳದೂ ಮುಳ್ಳುತುಂಬಿದ ಮೈ; ಹಂದಿಯನ್ನು ಹೋಲುವ ಮುಖ-ಮೂತಿ. ಹಾಗಾಗಿಯೇ ಈ ಹೆಸರು.

ಮುಳ್ಳುಹಂದಿಗಳಲ್ಲಿ ಎರಡು ಭಿನ್ನ ವರ್ಗಗಳಿವೆ: ‘ಹೆಡ್ಜ್‌ಹಾಗ್ ಮತ್ತು ಪಾರ್ಕ್ಯುಪೈನ್.’ ಹೆಡ್ಜ್‌ಹಾಗ್‌ಗಳು ಶತ್ರು ಎದುರಾದೊಡನೆ ಬಿಗಿಯಾಗಿ ಉಂಡೆಯಾಗಿ ‘ಮುಳ್ಳು ತುಂಬಿದ ಚೆಂಡಿನಂತೆ’ ಉರುಳಿಬಿಡುತ್ತದೆ. ಅದರ ಮುಳ್ಳು ಕವಚವನ್ನು ಹರಿದು, ದೇಹವನ್ನು ತೆರೆದು ತಿಂದುಹಾಕುವುದು ಬೇಟೆಗಾರರಿಗೆ ಅಸಾಧ್ಯ ಕೆಲಸ.

ಅದೇ ಪಾರ್ಕ್ಯುಪೈನ್‌ಗಳು ತಮ್ಮ ಮುಳ್ಳುಗಳಿಂದ ರಕ್ಷಣೆ ಪಡೆಯುವುದಷ್ಟೇ ಅಲ್ಲದೆ ಆಯುಧವಾಗಿಯೂ ಬಳಸುತ್ತವೆ. ಅದರಲ್ಲೂ ಆಫ್ರಿಕದ ಪಾರ್ಕ್ಯುಪೈನ್‌ಗಳು ಸೂಜಿಯಷ್ಟು ಚೂಪಾದ, ಒಂದೂವರೆ ಅಡಿ ಉದ್ದದ ಕಡ್ಡಿಗಳಂತಹ ಮುಳ್ಳಿನ ರಾಶಿಯನ್ನೇ ಧರಿಸಿವೆ (ಚಿತ್ರ ನೋಡಿ). ಸಿಂಹ, ಚಿರತೆಗಳಂತಹ ಬಲಾಢ್ಯ ಬೇಟೆಗಾರರಿಗೂ ಅವು ಹೆದರುವುದಿಲ್ಲ; ಶತ್ರುವೊಂದು ಎರಗಬಂದೊಡನೆ ತನ್ನ ಉದ್ದುದ್ದ ಮುಳ್ಳುಗಳನ್ನೆಲ್ಲ ಕೆದರಿ ಕಟಕಟ ಶಬ್ದದೊಡನೆ ಅಲುಗಿಸುತ್ತ ಹಿಂದು ಮುಂದಾಗಿ ಶತ್ರುವಿನತ್ತ ನುಗ್ಗುತ್ತದೆ. ಪಾರ್ಕ್ಯುಪೈನ್‌ನ ಈ ಭೀಕರ ಸ್ವರೂಪಕ್ಕೆ ಎಂಥ ಶತ್ರುವೂ ನಡುಗಿ ಹಿಮ್ಮೆಟ್ಟುತ್ತದೆ. ಇಲ್ಲವಾದರೆ ಮುಖಕ್ಕೋ ಮೈಗೋ ಚುಚ್ಚಿಕೊಳ್ಳುವ ಮುಳ್ಳುಗಳು ಮುಳ್ಳುಹಂದಿಯ ಶರೀರದಿಂದ ಕಳಚಿಕೊಂಡು ಕೀಳಲಾಗದಂತೆ ನಾಟಿ ನಿಂತು ಗಾಯಮಾಡಿ ವ್ರಣವಾಗಿಸಿ ಸುದೀರ್ಘ ಯಾತನೆ ತರುತ್ತವೆ.

ಉತ್ತರ-ದಕ್ಷಿಣ ಅಮೆರಿಕಗಳ ಪಾರ್ಕ್ಯುಪೈನ್ ಪ್ರಭೇದಗಳ ಮುಳ್ಳುಗಳದು ಮತ್ತೂ ಭಯಂಕರ ಪ್ರಕೃತಿ. ಈ ಮುಳ್ಳುಹಂದಿಗಳ ಪ್ರತಿ ಮುಳ್ಳಿನಲ್ಲೂ ಹೇರಳ ಕವಲುಗಳು ತುಂಬಿದ್ದು ಶತ್ರುವಿನ ಮೈಗೆ ಚುಚ್ಚಿಕೊಂಡೊಡನೆ ತಂತಾನೇ ಇಂಥ ಮುಳ್ಳುಗಳು ನಿಧಾನವಾಗಿ ಶತ್ರುವಿನ ದೇಹದೊಳಕ್ಕೆ ಮುನ್ನುಗ್ಗುತ್ತ ಕಡೆಗೆ ಹೃದಯ, ಶ್ವಾಸಕೋಶಗಳಂತಹ ಪ್ರಧಾನ ಅಂಗಗಳನ್ನೇ ತಲುಪಿ ಭಗ್ನಗೊಳಿಸಿ ಮರಣ ತರುತ್ತವೆ. ಅಪಾರ ವೇದನೆಯ ಸಾವಿಗೆ ದಾರಿಮಾಡುತ್ತವೆ.

ಇಂಥ ಮುಳ್ಳುಗಳ ರಕ್ಷಣಾ ಕವಚವೇ ಮುಳ್ಳುಹಂದಿಯ ವಿಶೇಷ.

■ ಎನ್. ವಾಸುದೇವ್